# ಹಂಪಿ ಟೈಮ್ಸ್
HAMPI TIMES

ಸಂಪಾದಕರು: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 156 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 21.12.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 156 • PRGI No:KARKAN/2023/88055 • VIJAYANAGARA • 21.12.2024 • Saturday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper





ಸುದ್ದಿ, ಜಾಹೀರಾತು ಕಚೇರಿ

ವಿಜಯನಗರ ಜಿಲ್ಲೆಯ ಸುದ್ದಿ ಜಾಹೀರಾತು ಪ್ರಕಟಣೆಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ

ಹಂಪಿ ಟೈಮ್ಸ್
ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038
Email: hampitimes@gmail.com


# ಶುಚಿತ್ವಕ್ಕಾಗಿ ಪಾವತಿಸಿ ಬಳಸಿ ಸ್ನಾನಕ್ಕೆ ಬಿಸಿನೀರು ಸೌಲಭ್ಯ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ | ಸುಲಭ್ ಶೌಚಾಲಯ ಉದ್ಘಾಟನೆ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಸೇರಿದಂತೆ ನಗರದ ವಿವಿಧೆಡೆ ಪಾವತಿಸಿ ಬಳಸುವ ಸುಸಜ್ಜಿತ ಸುಲಭ ಶೌಚಾಲಯಗಳನ್ನು ನಿರ್ಮಿಸಿದ್ದು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.


ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ನೂತನವಾಗಿ ನಿರ್ಮಿಸಿದ ಪಾವತಿಸಿ ಬಳಸುವ ಸುಲಭ್ ಶೌಚಾಲಯವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು. ಸಾರ್ವಜನಿಕರ ಅಗತ್ಯತೆಗೆ ತಕ್ಕಂತೆ ನಗರದ ವಿವಿಧೆಡೆ ಈಗಾಗಲೇ ಸಾರ್ವಜನಿಕ ಸ್ಥಳಗಳಲ್ಲಿ ಸುಲಭ ಶೌಚಾಲಯಗಳ ನಿರ್ಮಾಣ ಕಾರ್ಯ ಆರಂಭಿಸಲಾಗಿದೆ. ಬೋಯಿಂಗ್ ಕಂಪನಿಯಿಂದ ಸಿಎಸ್ಆರ್ ಅನುದಾನದಡಿ ಸುಸಜ್ಜಿತ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ. ಬಿಸಿ ನೀರು ಸಹಿತ ಸ್ನಾನ ಗೃಹಗಳನ್ನು ಹೊಂದಿರುವ ಶೌಚಾಲಯವು ಸಾರ್ವಜನಿಕರ ಅನುಕೂಲಕ್ಕೆ ತಕ್ಕಂತೆ ನಿರ್ಮಿಸಲಾಗಿದೆ. ಕಡಿಮೆ ದರ ಪಾವತಿಸಿ ಬಳಸುವ ಜತೆಗೆ ನೈರ್ಮಲ್ಯತೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ.




ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಬಾಣಂತಿಯರ ಜತೆಗೆ ಆಗಮಿಸುವ ಆರೈಕೆದಾರರು ಸೇರಿದಂತೆ ಸಾರ್ವಜನಿಕರಿಗೆ ಇದರಿಂದ ತುಂಬಾ ಅನುಕೂಲವಾಗಲಿದೆ. ಇದೇ ಮಾದರಿಯಲ್ಲಿ ಜಿಲ್ಲೆಯಾದ್ಯಂತ ವಿವಿಧ ತಾಲೂಕುಗಳಲ್ಲಿ ಸುಸಜ್ಜಿತ ಸುಲಭ ಶೌಚಾಲಯ ಆರಂಭಕ್ಕೆ ನಿವೇಶನ ಗುರುತಿಸಿ ನಿರ್ಮಾಣ ಕಾರ್ಯ ಆರಂಭಿಸಲಾಗುವುದು ಎಂದರು.

ಈ ವೇಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಂಕರನಾಯ್ಕ, ಆರ್‌ಸಿಎಚ್ ಅಧಿಕಾರಿ ಡಾ.ಜಂಬಯ್ಯ, ಪ್ರಮುಖ ವೈದ್ಯರಾದ ಡಾ.ಹರಿಪ್ರಸಾದ್, ಡಾ.ನೂರ್‌ಭಾಷಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಇತರರಿದ್ದರು.

# ಆನಂದ ಬಾಣ




# ಡಿ.22 ವಿದ್ಯುತ್ ವ್ಯತ್ಯಯ

ಹಂಪಿ ಟೈಮ್ಸ್ ಹೊಸಪೇಟೆ



110/11 ಕೆವಿ ಸಂಕ್ಲಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕೆಲಸದ ನಿಮಿತ್ತ ಡಿ.22 ರಂದು ಬೆಳಿಗ್ಗೆ11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ನಗರ ಉಪವಿಭಾಗ 2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ. 11ಕೆವಿ ಫೀಡರ್‌ಗಳಾದ ಜಂಬುನಾಥ ಗುಡಿ, ಕೆಓಎಫ್, ಎಂ.ಪಿ. ಪ್ರಕಾಶ ನಗರ, ಸಂಕ್ಲಾಪುರ ವ್ಯಾಪ್ತಿಗೆ ಒಳಪಡುವ ಸುತ್ತಮುತ್ತಲಿನ ಪ್ರದೇಶಗಳಾದ ಸಾಯಿಕಾಲೋನಿ, ಅನಂತ ಶಯನಗುಡಿ, ಕೊಂಡನಾಯಕನಹಳ್ಳಿ, ಸಂಕ್ಲಾಪುರ ಕೈಗಾರಿಕಾ ಪ್ರದೇಶ, ಕರ್ನಾಟಕ ಆಯಿಲ್ ಫ್ಯಾಕ್ಟರಿ ಏರಿಯಾ, ಕಾರಿಗನೂರ, ಜಂಬುನಾಥ ಹಳ್ಳಿ, ಮಾರುತಿ ಕಾಲೋನಿ, ಸಂಕ್ಲಾಪುರ, ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

# ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ: ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಪ್ರಸಕ್ತ ಸಾಲಿನಲ್ಲಿ ನೇರಸಾಲ ಯೋಜನೆಯಡಿ ಕುರಿ ಸಾಕಾಣಿಕೆ ಹಾಗೂ ಸ್ವಾವಲಂಬಿ ಸಾರಥಿ (ಫುಡ್‌ಕಾರ್ಟ್ ಉದ್ದೇಶಕ್ಕಾಗಿ ಮಾತ್ರ) ಯೋಜನೆಯಡಿ ಸಾಲ-ಸೌಲಭ್ಯಕ್ಕಾಗಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
ಆಸಕ್ತ ಅಭ್ಯರ್ಥಿಗಳು ಡಿ.29 ರೊಳಗಾಗಿ ಸೇವಾ-ಸಿಂಧು ಪೋರ್ಟಲ್‌ನ https://sevasindhu.karnataka.gov.in ಲಿಂಕ್ ಮೂಲಕ ಹತ್ತಿರದ ಗ್ರಾಮ ಒನ್, ಕರ್ನಾಟಕ ಒನ್‌ಗೆ >>4

# ಜ.3 ಬೃಹತ್ ಉದ್ಯೋಗ ಮೇಳ

■ ಹಂಪಿ ಟೈಮ್ಸ್ ಬಳ್ಳಾರಿ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ ಇವರ ಸಂಯುಕ್ತಾಶ್ರಯದಲ್ಲಿ ಕೌಶಲ್ಯ ಮತ್ತು ರೋಜ್‌ಗಾರ್ ಮೇಳ ಅಡಿ 2025 ರ ಜ.3 ರಂದು ನಗರದ ಡಾ.ರಾಜ್‌ಕುಮಾರ್ ರಸ್ತೆಯ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಇಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಉದ್ಯೋಗ ಮೇಳದಲ್ಲಿ ಸುಮಾರು 40 ರಿಂದ 50 ಕಂಪನಿಗಳು ಭಾಗವಹಿಸಲಿದ್ದು, ನಿರುದ್ಯೋಗ ಯುವಕ, ಯುವತಿಯರಿಗೆ ಉದ್ಯೋಗ ಕಲ್ಪಿಸಲು ಉದ್ದೇಶಿಸಲಾಗಿದೆ. ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮಾ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆವುಳ್ಳ ಉದ್ಯೋಕಾಂಕ್ಷಿಗಳು ಪೂರಕ ದಾಖಲಾತಿಗಳೊಂದಿಗೆ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಉದ್ಯೋಗಾಕಾಂಕ್ಷಿಗಳು ನೋಂದಣಿಗಾಗಿ ಇಲಾಖೆಯಿಂದ ಸೃಜಿಸಲಾಗಿರುವ ಗೂಗಲ್ ಫಾರ್ಮ್ ಲಿಂಕ್ https://forms.gle/YhbVhDQqMmHRF1uV7 ರಲ್ಲಿ ನೋಂದಾಯಿಸಿಕೊಳ್ಳಬಹುದು. ಜಿಲ್ಲಾ ಕೌಶಲ್ಯ ಮಿಷನ್ ಕಚೇರಿ ಅಥವಾ ದೂ.08392-294230, ಮೊ.9844444958, 6361607038 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಕೌಶ್ಯಲಾಭಿವೃದ್ಧಿ ಅಧಿಕಾರಿ ತಿಳಿಸಿದ್ದಾರೆ.


ಬಳ್ಳಾರಿ ವೀ. ವಿ. ಸಂಘದ
ಪ್ರೌಢದೇವರಾಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ
ಹೊಸಪೇಟೆ-583225, ವಿಜಯನಗರ ಜಿಲ್ಲೆ

ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ.
100 ಶತಮಾನೋತ್ಸವ ಸಂಭ್ರಮ 1916-2017



ಬಳ್ಳಾರಿ ವೀ.ವಿ. ಸಂಘದ ಕಾರ್ಯಕಾರಿಣಿ ಮಂಡಳಿ:
ಶ್ರೀ ಅಲ್ಲಂ ಗುರುಬಸವರಾಜ — ಅಧ್ಯಕ್ಷರು
ಶ್ರೀ ಜಾನೆಕುಂಟೆ ಬಸವರಾಜ — ಉಪಾಧ್ಯಕ್ಷರು
ಡಾ|| ಅರವಿಂದ ಪಟೇಲ್ — ಕಾರ್ಯದರ್ಶಿ
ಶ್ರೀ ಮೇಟಿ ಪಂಪನಗೌಡ — ಸಹಕಾರ್ಯದರ್ಶಿ
ಶ್ರೀ ಬೈಲುವದ್ದಿಗೇರಿ ಎರ್ರಿಸ್ವಾಮಿ — ಕೋಶಾಧಿಕಾರಿ

join, connect & network

ಪ್ರೌಢ-ಸಮ್ಮಿಲನ

ಹಳೆಯ ವಿದ್ಯಾರ್ಥಿ ಸಂಘದ ವಿದ್ಯಾರ್ಥಿಗಳ ಸಮ್ಮಿಲನಕ್ಕೆ ತಮಗೆ ಹಾರ್ದಿಕ ಸ್ವಾಗತ - ಸುಸ್ವಾಗತ
ದಿನಾಂಕ: 21ನೇ ಡಿಸೆಂಬರ್, 2024 | ಸಮಯ: ಬೆಳಗ್ಗೆ 10 ಗಂಟೆಗೆ | ಸ್ಥಳ: ಪಿಡಿಐಟಿಯ ಒಳ ಆವರಣ

ಮುಖ್ಯ ಅತಿಥಿಗಳು:
ಡಾ. ರಾಯನ ಗೌಡ
ಪ್ರೊಫೆಸರ್, ವಿಟಿಯು - ಬೆಳಗಾವಿ
ಪಿಡಿಐಟಿಯ ಹಳೆಯ ವಿದ್ಯಾರ್ಥಿ

ಗೌರವಾನ್ವಿತ ಅತಿಥಿಗಳು:
ಕು. ಕಾವ್ಯರಾಣಿ ಕೆ.ವಿ. ಕೆ.ಎ.ಎಸ್
ಉಪವಿಭಾಗಾಧಿಕಾರಿಗಳು ಹಾಗೂ ಉಪವಿಭಾಗೀಯ ದಂಡಾಧಿಕಾರಿಗಳು, ಶಿರಸಿ, ಉತ್ತರ ಕನ್ನಡ ಜಿಲ್ಲೆ
ಪಿಡಿಐಟಿಯ ಹಳೆಯ ವಿದ್ಯಾರ್ಥಿ

ಸಮಾರಂಭದ ಅಧ್ಯಕ್ಷತೆ:
ಶ್ರೀ ಅಲ್ಲಂ ಗುರುಬಸವರಾಜ
ಗೌರವಾನ್ವಿತ ಅಧ್ಯಕ್ಷರು, ವೀ. ವಿ. ಸಂಘ, ಬಳ್ಳಾರಿ

ಸುಸ್ವಾಗಮನವನ್ನು ಬಯಸುವವರು:
ಶ್ರೀ ಕರಿಬಸವರಾಜ ಬಾದಾಮಿ — ಅಧ್ಯಕ್ಷರು, ಪಿಡಿಐಟಿ — ಮೊ: 97420 81359
ಡಾ. ರೋಹಿತ ಯು.ಎಂ. — ಪ್ರಾಂಶುಪಾಲರು, ಪಿಡಿಐಟಿ — ಮೊ: 94497 39499
ಡಾ. ಪಾರ್ವತಿ ಕಡ್ಲಿ — ಉಪಪ್ರಾಂಶುಪಾಲರು, ಪಿಡಿಐಟಿ — ಮೊ: 98457 37130
ಡಾ. ಸಿಂಧು ಆರ್ — ಕಾರ್ಯದರ್ಶಿಗಳು, ಹಳೆಯ ವಿದ್ಯಾರ್ಥಿ ಸಂಘ — ಮೊ: 99006 92353

ಆಡಳಿತ ಮಂಡಳಿ ಸದಸ್ಯರು:
ಶ್ರೀ ಐ.ಎನ್. ಸಂಗನಬಸಪ್ಪ
ಶ್ರೀ ಬಿ. ಚಂದ್ರಮೌಳಿ
ಶ್ರೀ ಅನಿಲ್ ಆರ್. ಜವಳಿ
ಶ್ರೀ ಡಿ. ಗುರುಬಸವರಾಜ

www.pdit.ac.in

## ಸ್ಟುಡೆಂಟ್ ಕಾಲಂ

# ಅಮರ ಸ್ನೇಹ



ಕೋಡಿಹಳ್ಳಿಯಲ್ಲಿ ಕವಿತಾ ಮತ್ತು ತೇಜಸ್ವಿನಿ ಎಂಬ ಇಬ್ಬರು ಸ್ನೇಹಿತರು ಇದ್ದರು. ಇಬ್ಬರು ಒಬ್ಬರನ್ನು ಒಬ್ಬರು ಬಿಟ್ಟು ಇರುತ್ತಿರಲಿಲ್ಲ. ಅವರು ಯಾವುದೇ ಊರಿಗೆ ಹೋದರು ಜೊತೆಗೆ ಹೋಗುತ್ತಿದ್ದರು. ಹಬ್ಬ-ಹರಿ ದಿನಗಳನ್ನು ಜೊತೆಗೆ ಮಾಡುತ್ತಿದ್ದರು. ಶಾಲೆಗೆ ಜೊತೆಗೇ ಹೋಗುತ್ತಿದ್ದರು. ಇಬ್ಬರೂ ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಶಾಲೆಯಲ್ಲಿ ಯಾವುದೇ ಸ್ಪರ್ಧೆ ಮತ್ತು ಕಾರ್ಯಕ್ರಮಗಳಲ್ಲಿ ಇಬ್ಬರು ಭಾಗವಹಿಸುತ್ತಿದ್ದರು. ಹಾಗಾಗಿ ಶಾಲೆಯಲ್ಲಿ ಒಳ್ಳೆಯ ವಿದ್ಯಾರ್ಥಿಗಳು ಎನಿಸಿಕೊಂಡಿದ್ದರು. ಶಿಕ್ಷಕರು ನೀಡಿದ ಮನೆಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದರು.

ಎಂಟನೆಯ ತರಗತಿ ಪಾಸಾದ ನಂತರ ಕವಿತ ಮತ್ತು ತೇಜಸ್ವಿನಿ ಇಬ್ಬರೂ ಬೇರೆ ಬೇರೆ ಶಾಲೆಗೆ ಸೇರಿದರು. ಇಬ್ಬರೂ ದೂರವಾದರೂ ರಜೆ ದಿನಗಳಲ್ಲಿ ಬೇಟೆ ಆಗುತ್ತಿದ್ದರು. ರಜೆ ಮುಗಿದು ಶಾಲೆಗೆ ಹೋದ ನಂತರವೂ ಇಬ್ಬರು ಸ್ನೇಹಿತರನ್ನು ನೆನಪಿಸಿಕೊಳ್ಳುತ್ತಿದ್ದರು. ಒಂದು ದಿನ ತೇಜಸ್ವಿನಿ ಕವಿತಾಳನ್ನು ನೆನೆಸಿಕೊಂಡಳು. ತುಂಬಾ ದುಃಖವಾಯಿತು. ತೇಜಸ್ವಿನಿಗೆ ಹೆಚ್ಚು ಸ್ನೇಹಿತರಿದ್ದರು. ಅವರೆಲ್ಲರಿಗೂ ಕವಿತಳ ಬಗ್ಗೆ ಹೇಳುತಿದ್ದಳು.

ಒಮ್ಮೆ ತೇಜಶ್ವನಿಗೆ ಕವಿತಳನ್ನು ಮಾತನಾಡಿಸಬೇಕೆನಿಸಿತು. ತೇಜಸ್ವಿನಿ ಕವಿತಳನ್ನು ಭೇಟಿಯಾಗಲು ಅಮ್ಮನನ್ನು ಕೇಳಿದಳು. ಅವರ ಅಮ್ಮ 'ಈಗ ಬೇಡ ಮಗಳೇ' ಎಂದು ಹೇಳಿದರು. ಆಗ ತೇಜಸ್ವಿನಿ 'ಏಕೆ?' ಎಂದು ಕೇಳಿದಳು. ಆಗ ಅವರ ಅಪ್ಪ 'ಮಗಳೇ ಈಗ ತುಂಬಾ ಕೆಲಸಗಳು ಇವೆ. ಎರಡು ಅಥವಾ ಮೂರು ದಿನಗಳು ಬಿಟ್ಟು ಹೋಗೋಣ' ಎಂದರು.



ಎರಡು ಮೂರು ದಿನಗಳು ಮುಗಿಯುವುದರಲ್ಲಿ ನನ್ನ ಸ್ನೇಹಿತೆಗೆ ಏನಾದರೂ ಮಾಡಿಕೊಳ್ಳಬೇಕೆನಿಸಿತು. ಕವಿತಳಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಮಾಡಿಕೊಂಡಳು. ಕವಿತಳನ್ನು ನೋಡಲು ತೇಜಸ್ವಿನಿ ಹಾಗೂ ಅವರ ಅಮ್ಮ ಅಪ್ಪ ಬಂದರು. ಆಗ ಕವಿತಾ ತೇಜಸ್ವಿನಿ ಅಪ್ಪ ಅಮ್ಮನ ಜೊತೆಗೆ ಚೆನ್ನಾಗಿ ಮಾತನಾಡಿದಳು. ಅವರಿಗೆ ತುಂಬಾ ಖುಷಿಯಾಯಿತು.

ತುಂಬಾ ದಿನ ಕಳೆದ ಮೇಲೆ ಇದಕ್ಕಿದ್ದಂತೆ ತೇಜಸ್ವಿನಿಗೆ ಜ್ವರ ಬಂತು. ಇದು ಕವಿತಳಿಗೆ ಗೊತ್ತಾಯಿತು. ಆಗ ಅವಳು ತಕ್ಷಣವೇ ಆಸ್ಪತ್ರೆಗೆ ಬಂದಳು. ಬ್ರೆಡ್ಡು ಹಣ್ಣುಗಳನ್ನು ತಂದಳು. ಅವಳಿಗೆ ಜ್ವರ ಕಡಿಮೆ ಆಗುವವರೆಗೂ ಜೊತೆಗೆ ಇದ್ದಳು. ತೇಜಸ್ವಿನಿಯನ್ನು ಮನೆಗೆ ಕರೆದುಕೊಂಡು ಬಂದ ನಂತರ ಕವಿತಾ ಮರಳಿ ಊರಿಗೆ ಹೋದಳು. ಇಬ್ಬರೂ 9ನೇ ತರಗತಿ ಮುಗಿಸಿ 10ನೇ ತರಗತಿಗೆ ಬಂದರು. 10ನೇ ತರಗತಿಯಲ್ಲಿ ಅವರು ದೂರವಿದ್ದರೂ ಮೊದಲಿನಂತೆ ಅವರು ಒಳ್ಳೆಯ ವಿದ್ಯಾರ್ಥಿನಿ ಎಸಿಕೊಂಡಿದ್ದರು. ವಾರ್ಷಿಕ ಪರೀಕ್ಷೆಯನ್ನು ಮುಗಿಸಿ 10ನೇ ತರಗತಿ ಪಾಸಾದರು. ನಂತರ ಕಾಲೇಜಿಗೆ ಸೇರಿದರು. ಕಾಲೇಜಿನಲ್ಲೂ ಇಬ್ಬರೂ ಚೆನ್ನಾಗಿ ಓದಿದರು. ಮುಂದೆ ಇಬ್ಬರೂ ಉನ್ನತ ಹುದ್ದೆಯನ್ನು ಪಡೆದರು. ತಾವು ಓದಿದ ಶಾಲೆ ಹಾಗೂ ಊರಿಗೆ ಹೆಸರು ಮತ್ತು ಕೀರ್ತಿ ತಂದರು. ಅವರಿಬ್ಬರ ಸ್ನೇಹ ಅಮರವಾಗಿತ್ತು.

– ಎಸ್.ಎಂ.ಸಿಂಚನ 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಬಸರಕೋಡು, ಹ.ಬೊ.ಹಳ್ಳಿ(ತಾ)

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಇದ್ದಕ್ಕಿದ್ದಂತೆ ಮಾನವರೆಲ್ಲ ಮರೆಯಾದರೆ?

ಭೂಮಿಯ ಮೇಲೆ 7.6 ಶತಕೋಟಿ ಜನರಿದ್ದಾರೆ. ಇಷ್ಟೆಲ್ಲಾ ಜನರಿದ್ದರೂ ಪ್ರಕೃತಿಯನ್ನು ಉಳಿಸಿಕೊಳ್ಳುವಲ್ಲಿ ಎಲ್ಲರೂ ಸೋತಿದ್ದೇವೆ ಅಂತ ಅನಿಸುವುದಿಲ್ಲವೇ? ಅದರಲ್ಲಿ ನಾವು ಒಬ್ಬರು. ಎಲ್ಲರಿಂದ ಆಗಲಾರದ್ದು ಒಬ್ಬರಿಂದ ಸಾಧ್ಯವೇ? ಪ್ರತಿದಿನ ನಾವು ಬೇರೆ ಬೇರೆ ಸ್ಥಳಗಳಲ್ಲಿ ಅದೆಷ್ಟೋ ಜನರನ್ನು ನೋಡುತ್ತೇವೆ. ಆದರೆ ಅದರಲ್ಲಿ ಬಹುತೇಕರು ಅಪರಿಚಿತರು ಇರುತ್ತಾರೆ. ಇತ್ತೀಚಿನ ದಿನಗಳಲ್ಲಿ ಪರಿಚಿತರೂ ಸಹ ಅಪರಿಚಿತರಾಗುತ್ತಿರುವುದು ಮಾನವ ಇತಿಹಾಸದ ದುರಂತ. ಪ್ರಕೃತಿ ಸಂರಕ್ಷಣೆ ವಿಷಯ ಬಂದಾಗಲೆಲ್ಲ ಮಾನವರಿಂದಲೇ ಪ್ರಕೃತಿಯ ಅತ್ಯಾಚಾರ, ಅಸುರಕ್ಷಿತತೆ, ಮುಂತಾದ ರೀತಿಯಲ್ಲಿ ಮಾತನಾಡುತ್ತೇವೆ. ಹಾಗಾದರೆ ಭೂಮಿಯ ಮೇಲೆ ಮಾನವನ ಅವಶ್ಯಕತೆ ಇಲ್ಲವೇ? ಇದ್ದರೆ ಅದು ಹೇಗೆ? ಒಂದು ವೇಳೆ ಇದ್ದಕ್ಕಿದ್ದಂತೆ ಎಲ್ಲಾ ಮಾನವರು ಭೂಮಿಯಿಂದ ಕಣ್ಮರೆಯಾದರೆ ಏನಾಗುತ್ತೆ? ಎಂಬುದೊಂದು ಯಕ್ಷಪ್ರಶ್ನೆ.




ಭೂಮಿಯ ಮೇಲೆ ಮಾನವರು ಕಣ್ಮರೆಯಾದ ಮರುಕ್ಷಣವೇ ಅನೇಕ ಅಸ್ತವ್ಯಸ್ಥಗಳು ಉಂಟಾಗುತ್ತವೆ. ಪ್ರಮುಖವಾಗಿ ಚಲಿಸುತ್ತಿರುವ ವಿಮಾನ, ರೈಲು, ಮುಂತಾದ ವಾಹನಗಳೆಲ್ಲವೂ ಚಾಲಕರು ಇಲ್ಲದೇ ತಮ್ಮ ಸ್ಥಾನದಿಂದ ಮುಗ್ಗರಿಸುತ್ತವೆ ಅಥವಾ ಅಘಘಾತಕ್ಕೆ ಒಳಗಾಗುತ್ತವೆ. ಮಾನವರು ಮರೆಯಾದ ಒಂದು ಗಂಟೆಯೊಳಗೆ ಇಡೀ ಪ್ರಪಂಚದಾದ್ಯಂತ ವಿದ್ಯುತ್ ಕಡಿತ ಉಂಟಾಗುತ್ತದೆ. ಏಕೆಂದರೆ ಈಗ ಚಾಲ್ತಿಯಲ್ಲಿರುವ ಕಲ್ಲಿದ್ದಲು, ಗಾಳಿ, ನೀರು ಆಧಾರಿತ ವಿದ್ಯುತ್ ವ್ಯವಸ್ಥೆ ಎಲ್ಲವೂ ಮಾನವ ಮೇಲ್ವಿಚಾರಣೆಯಲ್ಲಿಯೇ ನಡೆಯುತ್ತಿದೆ. ಹಾಗಾಗಿ ಮಾನವರು ಮರೆಯಾದರೆ ನಿರ್ವಹಣೆಯ ವ್ಯವಸ್ಥೆ ಇಲ್ಲದೆ ಸರಬರಾಜು ಸ್ಥಗಿತಗೊಳ್ಳುತ್ತದೆ.

ಮಾನವರು ಮರೆಯಾದ ಮರುದಿನದಿಂದ ಪರಮಾಣು ರಿಯಾಕ್ಟರ್‌ಗಳೆಲ್ಲವೂ ಕಾರ್ಯ ಸ್ಥಗಿತಗೊಳ್ಳುತ್ತವೆ. ಏಕೆಂದರೆ ಅವುಗಳನ್ನು ನಿರ್ವಹಿಸಲು ಆಪರೇಟರ್ ಇಲ್ಲದೇ ಕಂಪ್ಯೂಟರ್‌ಗಳೆಲ್ಲವೂ ಶಟ್‌ಡೌನ್ ಆಗುತ್ತವೆ. ಹಾಗಾಗಿ ಇದ್ದ ಅಲ್ಪಸ್ವಲ್ಪ ಪರಮಾಣು ವಿದ್ಯುತ್ ಸಹ ಕಡಿತಗೊಳ್ಳುತ್ತದೆ.

ಜನರಿಲ್ಲದೆ ರಸ್ತೆಗಳೆಲ್ಲಾ ಬಿಕೋ ಎನ್ನುತ್ತವೆ. ಸಾಕುಪ್ರಾಣಿಗಳು ಹಾಗೂ ಸಂಗ್ರಹಾಲಯದ ಪ್ರಾಣಿಗಳು ಆಹಾರವಿಲ್ಲದೇ ನರಳಿ ನರಳಿ ಸಾಯುತ್ತವೆ. ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗುತ್ತದೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಮಾನವರು ಮರೆಯಾಗಿ 10 ದಿನಗಳ ನಂತರ ಪರಮಾಣು ವಿದ್ಯುತ್ ಸ್ಥಾವರಗಳ ಭದ್ರತಾ ಕ್ರಮ ವಿಫಲವಾಗುತ್ತದೆ. ವಿಕಿರಣಗಳು ಬಿಡುಗಡೆ ಯಾಗುತ್ತವೆ. ವಿಕಿರಣದಿಂದ ಆ ಪ್ರದೇಶದಲ್ಲಿನ ವನ್ಯಜೀವಿಗಳು ಸಾಯುತ್ತವೆ. ಕೆಲವು ಕ್ರಿಮಿ ಕೀಟಗಳು ಮೇಲುಗೈ ಸಾಧಿಸುತ್ತವೆ. ಅಂಗಡಿಗಳು ಮತ್ತು ಮಾಲ್‌ಗಳಲ್ಲಿ ಇಲಿ, ಹೆಗ್ಗಣಗಳು ಸಾಮ್ರಾಜ್ಯವನ್ನು ವಿಸ್ತರಿಸುತ್ತವೆ.

ಮಾನವ ಮರೆಯಾಗಿ ಕೆಲವೇ ವರ್ಷಗಳಲ್ಲಿ ನಗರಗಳೆಲ್ಲವೂ ನೈಸರ್ಗಿಕ ಥೀಮ್ ಪಾರ್ಕ್‌ಗಳಾಗಿ ಪರಿವರ್ತನೆ ಹೊಂದುತ್ತವೆ. ಎಲ್ಲಡೆ ಮರಗಳ ಎಲೆ, ಹೂ, ಹಾಗೂ ಕಸದ ರಾಶಿ ಗೋಪುರಗಳಂತೆ ಕಾಣುತ್ತವೆ. ರಸ್ತೆಯ ಇಕ್ಕೆಲಗಳಲ್ಲಿದ್ದ ಮರಗಳ ಟೊಂಗೆಗಳು ರಸ್ತೆಯ ತುಂಬಾ ಚಾಚಿಕೊಳ್ಳುತ್ತವೆ. ನಾವು ಅಂತರಿಕ್ಷಕ್ಕೆ ಕಳಿಸಿದ ಉಪಗ್ರಹ ಗಳೆಲ್ಲಾ ಮೂವತ್ತು ವರ್ಷಗಳ ನಂತರ ನಿರ್ವಹಣೆ ಇಲ್ಲದೇ ಮಾಹಿತಿ ಸಂಗ್ರಹಿಸುವುದನ್ನು ನಿಲ್ಲಿಸುತ್ತವೆ. ಅಂತರಿಕ್ಷದಲ್ಲೇ ಬಿಡಾಡಿ ದನಗಳಂತೆ ಮನಬಂದತೆ ತಿರುಗಾಡುತ್ತವೆ.

ಮನೆಗಳು ಹಾಗೂ ಗಗನಚುಂಬಿ ಕಟ್ಟಡಗಳೆಲ್ಲ ಕುಸಿಯುತ್ತವೆ. ಕರಾವಳಿ ಪ್ರದೇಶದ ನಗರಗಳೆಲ್ಲ ಸಮುದ್ರದಲ್ಲಿ ಮುಳುಗುತ್ತವೆ. ಹಡಗುಗಳೆಲ್ಲ ಸಮುದ್ರದ ತಳ ಸೇರುತ್ತವೆ. ಹೊಸ ದಿಬ್ಬಗಳಾಗಿ ಪರಿವರ್ತನೆ ಹೊಂದುತ್ತವೆ. ನಮ್ಮ ಅನುಪಸ್ಥಿತಿಯ ಹೊರತಾಗಿಯೂ 40 ವರ್ಷಗಳವರೆಗೆ ಜಾಗತಿಕ ತಾಪಮಾನ ಏರಿಕೆಯು ಮುಂದುವರೆ ಯುತ್ತದೆ. ಭೂಮಿಯ ತಾಪವು 1.1 ಫ್ಯಾರನ್‌ಹೀಟ್ ನಷ್ಟು ಹೆಚ್ಚುತ್ತದೆ. ಆದರೂ ಪರಿಸರದಲ್ಲಿ ಯಾವುದೇ ಬದಲಾವಣೆಗಳು ಸಂಭವಿಸು ವುದಿಲ್ಲ.

60 ವರ್ಷಗಳ ನಂತರ ಸಮುದ್ರದಲ್ಲಿ ಮೀನುಗಳ ಸಂಖ್ಯೆ ಹೆಚ್ಚಾಗುತ್ತದೆ. 150 ವರ್ಷಗಳ ನಂತರ ಎಲ್ಲಾ ಜನವಸತಿ ಪ್ರದೇಶಗಳು ಕಾಡುಗಳಾಗಿ ಪರಿವರ್ತನೆ ಹೊಂದುತ್ತವೆ. ವ್ಯಾಂಕೋವರ್‌ನಂತಹ ಹಿಮಚ್ಛಾದಿಕತ ಪ್ರದೇಶದ ಕಟ್ಟಡಗಳು ಅಸ್ಥಿಪಂಜರದಂತೆ ರೂಪಾಂತರಗೊಳ್ಳುತ್ತವೆ. ಲಾಸ್‌ವೇಗಾಸ್‌ನಂತಹ ಮರುಭೂಮಿ ನಗರಗಳು ದೈತ್ಯ ಮರಳಿನ ಕೋಟೆಗಳಂತೆ ಕಾಣುತ್ತವೆ.

230 ವರ್ಷಗಳ ನಂತರ ಭೂಮಿಯ ಮೇಲೆ ಸಸ್ಯವರ್ಗ ಅಧಿಕವಾಗುತ್ತದೆ. ಬೃಹತ್ ಕಾಡುಗಳು ನಿರ್ಮಾಣವಾಗುತ್ತವೆ. ಭೂಮಿಯ ಮೇಲೆ ಮಾನವ ನಿರ್ಮಿತ ಹೆಗ್ಗುರುತುಗಳೆಲ್ಲಾ ಕ್ರಮೇಣವಾಗಿ ನಾಶಹೊಂದುತ್ತವೆ. ಪ್ಲಾಸ್ಟಿಕ್ ಮತ್ತು ಕಬ್ಬಿಣದಂತಹ ಕೆಲವು ಲೋಹಗಳು ಮಾತ್ರ ಮಾನವ ಇದ್ದ ಎನ್ನುವುದಕ್ಕೆ ಸಾಕ್ಷಿಯಾಗುತ್ತವೆ. 500 ವರ್ಷಗಳ ನಂತರ ಕಾಡುಗಳೆಲ್ಲವೂ ಸಮೃದ್ಧವಾಗಿ 10,000 ವರ್ಷಗಳ ಹಿಂದಿನ ಆರೋಗ್ಯ ಪಡೆದುಕೊಳ್ಳುತ್ತವೆ. ನೈಸರ್ಗಿಕ ಪರಿಸರವು ಮಾನವನ ಎಲ್ಲಾ ಕುರುಹುಗಳನ್ನು ಅಂತಿಮವಾಗಿ ಅಳಿಸಿಹಾಕುವಲ್ಲಿ ಯಶಸ್ವಿಯಾಗುತ್ತದೆ. 25,000 ವರ್ಷಗಳ ನಂತರವೂ ನಮ್ಮ ಅಸ್ತಿತ್ವದ ಕುರುಹಾಗಿದ್ದ ಪ್ಲಾಸ್ಟಿಕ್ ವಸ್ತುಗಳು ಇನ್ನೂ ಹಾಗೆಯೇ ಉಳಿಯುತ್ತವೆ.

ಈಗ ಹೇಳಿ 7.6 ಶತಕೋಟಿಯಲ್ಲಿ ಕನಿಷ್ಟ ನಾವೂ ಒಬ್ಬರಾಗಬೇಕೇ? ಮಾನವರು ಭೂಮಿಯ ಮೇಲೆ ಇದ್ದರು ಎಂಬ ಸತ್ಯವನ್ನು ಮರೆಮಾಚಲು 25,000ಕ್ಕಿಂತಲೂ ಹೆಚ್ಚು ವರ್ಷ ಬೇಕಾಗುತ್ತದೆ. ಹಾಗಾಗಿ ಇರುವಷ್ಟು ವರ್ಷಗಳಲ್ಲಿ ಭೂಮಿಗೆ ಯಾವ ಅಪಾಯವನ್ನೂ ಮಾಡದ ರೀತಿಯಲ್ಲಿ ಬದುಕೋಣ. ಔಷಧ ರಹಿತ ಭಯಂಕರ ರೋಗ, ಕ್ಷಾಮ, ಹವಾಮಾನ ವೈಪರೀತ್ಯ ಮತ್ತು ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳಿಂದ ಮಾತ್ರ ಭೂಮಿಯ ಮೇಲೆ ಮಾನವರನ್ನು ಇದ್ದಕ್ಕಿದ್ದಂತೆ ಮರೆಮಾಡಲು ಸಾಧ್ಯ. ಮಾನವನ ಅಳಿವಿನ ನಂತರ ಮಾತ್ರ ಜಾತಿ, ಧರ್ಮಗಳಂತಹ ಸಂಕೋಲೆಗಳು ಭೂಮಿಯಿಂದ ನಾಶವಾಗಲು ಸಾಧ್ಯ. ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯಿಂದ ಮಾನವ ಜೀವನ ವೇಗ ಪಡೆಯಿತು ಎಂಬುದನ್ನು ಬಿಟ್ಟರೆ ಉಳಿದ ಜೀವರಾಶಿಗೆ ಇದರಿಂದ ಯಾವುದೇ ಲಾಭವಾಗಲಿಲ್ಲ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

-: ಸಂಪಾದಕರು :-
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಮಕ್ಕಳಿಗೆ ಹೇಳ್ತೀವಿ ನಾವು ಮಾಡ್ತಿಲ್ಲ!

ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಪಾಲಕರ ಒಂದು ದೊಡ್ಡ ಕೊರಗು ಎಂದರೆ ತಮ್ಮ ಮಕ್ಕಳು ಯಾವುದೇ ಮಾತುಗಳನ್ನು ಕೇಳುತ್ತಿಲ್ಲ. ಓದುವ ಹವ್ಯಾಸ ತುಂಬಾ ಕಡಿಮೆಯಾಗುತ್ತಿದ್ದು, ಮೊಬೈಲ್‌ಗೆ ದಾಸರಾಗತ್ತಿದ್ದಾರೆ. ಅತೀ ಹೆಚ್ಚು ಸಮಯವನ್ನು ಮೊಬೈಲ್‌ನಲ್ಲೇ ಕಳೆಯುತ್ತಿದ್ದಾರೆ ಎಂಬುದು. ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕುವುದಾದರೆ ಅದು ಮಕ್ಕಳ ತಪ್ಪಲ್ಲ, ಪಾಲಕರದೇ ತಪ್ಪು ಎಂದು ಹೇಳಬಹುದು. 'ನಾನು ಹೇಳಿದಂತೆ ಮಾಡು, ಆದರೆ ನಾನು ಮಾಡುವಂತೆ ಅಲ್ಲ' ಎಂದರೆ ಹೇಗೆ? ಮಕ್ಕಳಿಗೆ ನಾವು ಏನು ಹೇಳುತ್ತೇವೆಯೋ ಮೊದಲು ಅದನ್ನು ನಾವು ಅಳವಡಿಸಿಕೊಳ್ಳಬೇಕು. ಮಕ್ಕಳೆದುರು ಮೊಬೈಲ್ ಬಳಸುವ ಬದಲು ಪುಸ್ತಕ ಹಿಡಿಯೋಣ, ಆಗ ಅವರು ಕೂಡ ಪುಸ್ತಕದ ಹವ್ಯಾಸ ಬೆಳೆಸಿಕೊಳ್ಳುವರು. ಬೆಳಿಗ್ಗೆ 5 ಗಂಟೆಗೆ ಏಳು ಎಂದು ಆದೇಶ ಮಾಡುವ ಬದಲು ನಾವೇ ಎದ್ದು ಮಾದರಿಯಾಗಬೇಕು. ಜೀವನಕ್ಕೆ ಅತ್ಯಗತ್ಯವಾದ ಹಲವಾರು ಸಂಗತಿಗಳನ್ನು ಮಕ್ಕಳು ಪಾಲಕರನ್ನು ಅನುಕರಿಸುವುದರಿಂದಲೇ ಕಲಿಯುತ್ತಾರೆ. ಅವುಗಳಲ್ಲಿ ಕೆಲವುಗಳನ್ನು ನೋಡುವುದಾದರೆ–





ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ

Scan For Digital Colourful
HAMPI TIMES E-paper

**ಸಂವಹನ ಶೈಲಿ:** ಸ್ವರದಿಂದ ಪದಗುಚ್ಛದವರೆಗೆ, ಮಕ್ಕಳು ಸಾಮಾನ್ಯವಾಗಿ ತಮ್ಮ ಪಾಲಕರು ಸಂವಹನ ಮಾಡುವ ವಿಧಾನವನ್ನೇ ಅಳವಡಿಸಿಕೊಳ್ಳುತ್ತಾರೆ. ಪಾಲಕರು ಇತರರೊಂದಿಗೆ ಹೇಗೆ ಮಾತನಾಡುತ್ತಾರೆ ಎಂಬುದನ್ನು ಗಮನಿಸುತ್ತಾರೆ. ಹೀಗಾಗಿ ಮನೆಯ ವಾತಾವರಣದಲ್ಲಿ ಸಭ್ಯ ಭಾಷೆಯ ಬಳಕೆ ಮಾಡಬೇಕಿದೆ.

**ಭಾವನಾತ್ಮಕ ಪ್ರತಿಕ್ರಿಯೆಗಳು:** ಮನೆಯಲ್ಲಿ ಭಾವನೆಗಳನ್ನು ಹೇಗೆ ವ್ಯಕ್ತಪಡಿಸಲಾಗುತ್ತದೆ ಮತ್ತು ನಿರ್ವಹಿಸಲಾಗುತ್ತದೆ ಎಂಬುದನ್ನು ಅವರ ಪಾಲಕರಿಂದ ತಿಳಿದುಕೊಳ್ಳುತ್ತಾರೆ. ವಿಶೇಷವಾಗಿ ಒತ್ತಡದ ಸಂದರ್ಭಗಳನ್ನು ಪಾಲಕರು ಶಾಂತವಾಗಿ ನಿಭಾಯಿಸಿದರೆ ಅವರ ಮಕ್ಕಳು ಕೂಡ ಇದೇ ರೀತಿಯ ಭಾವನಾತ್ಮಕ ನಿಯಂತ್ರಣವನ್ನು ಬೆಳೆಸಿಕೊಳ್ಳುತ್ತಾರೆ.

**ಆರೋಗ್ಯ ಮತ್ತು ಫಿಟ್ನೆಸ್ ಕಡೆಗೆ:** ತಮ್ಮ ಸ್ವಂತ ಆರೋಗ್ಯ ಮತ್ತು ದೇಹದ ಕಡೆಗೆ ಪಾಲಕರು ವಹಿಸುವ ಕಾಳಜಿಯು ಕೂಡ ಮಕ್ಕಳನ್ನು ಪ್ರಭಾವಿಸುತ್ತದೆ. ಅದು ನಿಯಮಿತ ವ್ಯಾಯಾಮ, ಯೋಗಾಸನ, ವೇಗದ ನಡಿಗೆ, ಆಹಾರದ ಆಯ್ಕೆ ಮುಂತಾದವು. ಹಿತಮಿತವಾದ ಸಮತೋಲಿತ ಆಹಾರ ಸೇವನೆಯ ಮಹತ್ವವನ್ನು ಮಕ್ಕಳಿಗೆ ತಿಳಿಸಬಹುದು. ಇದೇ ರೀತಿಯ ಅಭ್ಯಾಸಗಳನ್ನು ಮಕ್ಕಳು ಕೂಡ ಅಳವಡಿಸಿಕೊಳ್ಳುವ ಸಾಧ್ಯತೆಯಿದೆ.

**ಸಮಸ್ಯೆ–ಪರಿಹರಿಸುವ ವಿಧಾನ:** ಪಾಲಕರು ತಮ್ಮ ದಿನನಿತ್ಯದ ಸವಾಲುಗಳು, ಹಿನ್ನಡೆಗಳು ಅಥವಾ ಘರ್ಷಣೆಗಳನ್ನು ನಿಭಾಯಿಸುವ ವಿಧಾನವು ಮಗುವಿಗೆ ಮಾರ್ಗದರ್ಶನವಾಗಬಲ್ಲದು. ಪಾಲಕರ ವಿಮರ್ಶಾತ್ಮಕ ಚಿಂತನೆ ಅಥವಾ ಸಮಸ್ಯೆಗಳನ್ನು ಪರಿಹರಿಸುವ ಕಡೆಗೆ ಸಕಾರಾತ್ಮಕ ಮನೋಭಾವ ಮಕ್ಕಳನ್ನು ಯಾವುದೇ ಸಮಸ್ಯೆಗೆ ಎದೆಗುಂದದೆ ಕಾರ್ಯಪ್ರವೃತ್ತರಾಗುವಂತೆ ಪ್ರೋತ್ಸಾಹಿಸಬಲ್ಲದು.

**ಕೆಲಸದ ನೀತಿ ಮತ್ತು ಜವಾಬ್ದಾರಿ:** ಮಕ್ಕಳು ತಮ್ಮ ಪಾಲಕರು ಮಾಡುವ ಕೆಲಸ, ಮನೆಯ ಜವಾಬ್ದಾರಿಗಳು ಮತ್ತು ವಿರಾಮದ ಸಮಯವನ್ನು ಹೇಗೆ ಸಮತೋಲನಗೊಳಿಸುತ್ತಾರೆ? ಎಂಬುದನ್ನು ಗಮನಿಸುತ್ತಾರೆ. ಕಠಿಣ ಪರಿಶ್ರಮ, ಶಿಸ್ತು ಮತ್ತು ಜವಾಬ್ದಾರಿಯನ್ನು ಒತ್ತಿಹೇಳುವ ಪಾಲಕರು ಈ ಗುಣಲಕ್ಷಣಗಳನ್ನು ಗೌರವಿಸುವ ಮಕ್ಕಳನ್ನು ಬೆಳೆಸುತ್ತಾರೆ.

**ಸಹಾನುಭೂತಿ ಮತ್ತು ದಯೆ:** ಪಾಲಕರು ಕುಟುಂಬದ ಸದಸ್ಯರು, ಸ್ನೇಹಿತರು ಅಥವಾ ಅಪರಿಚಿತರಿಗೆ ಸಹಾನುಭೂತಿಯನ್ನು ತೋರಿಸುವ ರೀತಿ, ಅದು ತಮ್ಮ ಮಕ್ಕಳ ಮೇಲೆ ಶಾಶ್ವತವಾದ ಪ್ರಭಾವವನ್ನು ಬೀರುತ್ತದೆ. ದಯೆ, ಸಹಾನುಭೂತಿ ಮತ್ತು ಇತರರಿಗೆ ಸಹಾಯ ಮಾಡುವ ಕ್ರಿಯೆಗಳನ್ನು ತಮ್ಮ ಪಾಲಕರ ಸಂವಹನಗಳನ್ನು ಗಮನಿಸುವುದರ ಮೂಲಕ ಮಕ್ಕಳು ಸಾಮಾನ್ಯವಾಗಿ ಅಳವಡಿಸಿಕೊಳ್ಳುವ ನಡವಳಿಕೆಗಳಾಗಿವೆ.

**ಆತ್ಮವಿಶ್ವಾಸ ಮತ್ತು ಸ್ವಾಭಿಮಾನ:** ಪಾಲಕರ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವು ತಮ್ಮ ಮಕ್ಕಳ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ. ಮಕ್ಕಳು ತಮ್ಮ ಪಾಲಕರಲ್ಲಿ ಕಾಣುವ ಆತ್ಮವಿಶ್ವಾಸವನ್ನೇ ಪ್ರತಿಫಲಿಸುತ್ತಾರೆ. ಈ ಆತ್ಮವಿಶ್ವಾಸವು ಮಕ್ಕಳು ಸಾಮಾಜಿಕ ಸನ್ನಿವೇಶಗಳು ಮತ್ತು ಸವಾಲುಗಳನ್ನು ಹೇಗೆ ಎದುರಿಸುತ್ತಾರೆ ಎಂಬುದರ ಮೇಲೆ ಪರಿಣಾಮ ಬೀರುತ್ತದೆ.

**ಮನೆಯ ಕೌಶಲ್ಯಗಳು:** ಮನೆಕೆಲಸಗಳಿಂದ ಹಿಡಿದು ದೈನಂದಿನ ವೇಳಾಪಟ್ಟಿಯನ್ನು ನಿರ್ವಹಿಸುವವರೆಗೆ, ಮಕ್ಕಳು ಸಾಮಾನ್ಯವಾಗಿ ತಮ್ಮ ಪಾಲಕರನ್ನೇ ಅನುಕರಿಸುತ್ತಾರೆ. ಮನೆಯಲ್ಲಿನ ಸಣ್ಣಪುಟ್ಟ ಕೆಲಸಗಳನ್ನೂ ಕೂಡ ಅಚ್ಚುಕಟ್ಟಾಗಿ ಮತ್ತು ಸಂಘಟಿತವಾಗಿ ನಿರ್ವಹಿಸುವ ಪಾಲಕರು ತಮ್ಮ ಮಕ್ಕಳಲ್ಲಿಯೂ ಆ ಕೌಶಲ್ಯ ಬೆಳೆಸಬಲ್ಲರು. ಸಮಯ ನಿರ್ವಹಣೆಯ ಕೌಶಲ್ಯವನ್ನು ಕಂಡುಕೊಳ್ಳಬಲ್ಲರು.

**ಸಂಘರ್ಷ ಪರಿಹಾರ:** ಕುಟುಂಬದೊಂದಿಗೆ ವಿವಾದಗಳನ್ನು ಪರಿಹರಿಸುವುದು ಅಥವಾ ಇತರರೊಂದಿಗೆ ಭಿನ್ನಾಭಿಪ್ರಾಯಗಳನ್ನು ನಿಭಾಯಿಸುವುದನ್ನು ಮಕ್ಕಳು ತಮ್ಮ ಪಾಲಕರನ್ನು ಗಮನಿಸುವುದರ ಮೂಲಕ ಕಲಿಯುತ್ತಾರೆ. ಪಾಲಕರು ಆರೋಗ್ಯಕರ ಸಂವಹನ ಮತ್ತು ಸಂಧಾನ ಮಾರ್ಗ ಬಳಸಿದರೆ, ಅವರ ಮಕ್ಕಳು ಕೂಡ ಈ ನಡವಳಿಕೆಗಳನ್ನು ಅಳವಡಿಸಿಕೊಳ್ಳುವ ಸಾಧ್ಯತೆ ಹೆಚ್ಚು.

ಒಟ್ಟಾರೆಯಾಗಿ ಪಾಲಕರ ಆದೇಶದ ಮಾತುಗಳಿಗಿಂತ ಅವರ ಆದರ್ಶದ ವ್ಯಕ್ತಿತ್ವವನ್ನು ಅನುಕರಣೆಯ ಮೂಲಕ ಮಕ್ಕಳು ಅಳವಡಿಸಕೊಳ್ಳುವುದರಿಂದ ಅವರಿಗೆ ಮಾದರಿಯಾಗುವ ಜೀವನಶೈಲಿ ನಮ್ಮದಾಗಲಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಇಬ್ಬನಿ ಕರಗಿತು

ಕವಿದಿದೆ ಇಳೆಗೆ ಇಬ್ಬನಿಯ ಮುಸುಕು
ಮರೆಮಾಚುತ ಸೂರ್ಯನ ಬೆಳಗಿನ ಬೆಳಕು
ಚಿಕ್ಕದೊಂದು ಮನಸ್ತಾಪದಿ ಒಡೆದಿದೆ
ಮನಸು
ಒಲವ ಮರೆಸಿ ಮುಗಿಲೆದ್ದಿದೆ ಮುನಿಸು

ಸರಿಸುತ ಕವಿದ ಇಬ್ಬನಿಯ ಚಾದರ
ಕಿರಣವ ತೂರಿದ ಮುಂಜಾವಿನ ನೇಸರ
ನವಿರಾಗಿ ಮನವ ಜಗ್ಗಿದೆ ಏಕಾಂತ
ಹೃದಯವು ಇನ್ನೂ ಇರದು ಪ್ರಶಾಂತ

ಹೊಂಗಿರಣದ ಸ್ಪರ್ಶದಿ ಭೂ ತಾಯಿಯ
ಸಂಚಲನ
ನಿನ್ನಯ ಪ್ರೀತಿಯೇ ಈ ಜೀವಕೆ ಚೇತನ
ಬಿಸಿಲಿನ ತಾಪಕೆ ಇಬ್ಬನಿಯು ಕರಗಿತು
ನಿನ್ನಯ ಪ್ರೇಮಕೆ ಮನವು ಸೋತಿತು

ನನ್ನುಸಿರಿನ ಕಣಕಣವು ಹಂಬಲಿಸುತಿದೆ
ಪ್ರೀತಿಗೆ
ಕಾತರದಲಿ ಕಾಯುತಿರುವೆ ನಿನ್ನಯ ಅಪ್ಪುಗೆಗೆ
ನೀನಿರದ ಈ ಬದುಕನ್ನು ಕಲ್ಪಿಸುವುದು
ಅಸಾಧ್ಯ
ನಿನ್ನಿಂದ ಮಾತ್ರವೇ ನನ್ನೀ ಬಾಳನ್ನು
ಬೆಳಗಲು ಸಾಧ್ಯ

– ಚೇತನ ಭಾರ್ಗವ, ಬೆಂಗಳೂರು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮದಲ್ಲಿ ಫ್ರಾನ್ಸಿಸ್.ಬಿ ಹೇಳಿಕೆ

# ಮಕ್ಕಳಿಗೆ ಪಠ್ಯದ ಜೊತೆ ಕಲೆ ಸಂಸ್ಕೃತಿ ತಿಳಿಸಿ



■ ಹಂಪಿ ಟೈಮ್ಸ್ ಬಳ್ಳಾರಿ

ಶಾಲಾ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಅವರ ಪ್ರತಿಭೆಯನ್ನು ಹೊರಹಾಕುವಲ್ಲಿ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವದಂತಹ ಕಾರ್ಯಕ್ರಮಗಳು ಸಹಕಾರಿಯಾಗಿದ್ದು, ಮಕ್ಕಳು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಸಂತ ಜಾನರ ವಿದ್ಯಾಸಂಸ್ಥೆಯ ವ್ಯವಸ್ಥಾಪಕರು ಹಾಗೂ ಪತ್ರ ವ್ಯವಹಾರಾಧಿಕಾರಿ ಫಾದರ್ ಫ್ರಾನ್ಸಿಸ್.ಬಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಕೋಟೆ ಪ್ರದೇಶದಲ್ಲಿರುವ ಸಂತಜಾನ್ ಪ್ರೌಢಶಾಲೆ ಆವರಣದಲ್ಲಿ ಶುಕ್ರವಾರ ಏರ್ಪಡಿಸಿದ್ದ 2024–25ನೇ ಸಾಲಿನ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಎಲ್ಲಾ ಮಕ್ಕಳು ಸಮರ್ಥರು, ಎಲ್ಲರಲ್ಲೂ ಒಂದೊಂದು ವಿಧದ ಪ್ರತಿಭೆ ಅಡಗಿದ್ದು, ಅವುಗಳನ್ನು ಗುರುತಿಸಿ ಸೂಕ್ತ ವೇದಿಕೆ ಕಲ್ಪಿಸಿ ಅವರನ್ನು ಪ್ರೋತ್ಸಾಹಿಸುವ ಕೆಲಸ ನಮ್ಮ ಶಿಕ್ಷಕರು ಹಾಗೂ ಪೋಷಕರು ಮಾಡಬೇಕು. ಸೋಲು–ಗೆಲುವು ಮುಖ್ಯವಲ್ಲ, ಬದಲಾಗಿ ಮಕ್ಕಳು ಭಾಗವಹಿಸುವುದು ಮುಖ್ಯ ಎಂದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಿ.ಉಮಾದೇವಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಶಾಲಾ ಮಕ್ಕಳಿಗೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಿಗೆ ಒತ್ತು ನೀಡುವ ಕೆಲಸ ಶಿಕ್ಷಕರು ಮಾಡಬೇಕು. ಪಾಠದ ಜತೆಗೆ ಕಲೆ ಮತ್ತು ಸಂಸ್ಕೃತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ತಿಳಿಸುವ ಕೆಲಸ ಮಾಡಬೇಕು ಎಂದರು.

ನಮ್ಮ ಜಿಲ್ಲೆಯ ಹೆಚ್ಚಿನ ಮಕ್ಕಳು ರಾಜ್ಯಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಮಿಂಚಿ, ಹೆಚ್ಚಿನ ಪ್ರಶಸ್ತಿಗಳನ್ನು ತರುವುದರ ಮೂಲಕ ಜಿಲ್ಲೆಗೆ ಕೀರ್ತಿ ತನ್ನಿ ಎಂದು ಶುಭ ಹಾರೈಸಿದರು.

ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿಗೆ ನಿಯೋಜಿತರಾದ ತೀರ್ಪುಗಾರರರು ಅತ್ಯಂತ ನಿಷ್ಪಕ್ಷಪಾತವಾಗಿ ಪ್ರತಿಭಾವಂತರನ್ನು ಆಯ್ಕೆ ಮಾಡಬೇಕು. ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಆಯ್ಕೆಯಾದ ಪ್ರತಿಭೆಗಳು ರಾಜ್ಯಮಟ್ಟದಲ್ಲಿ ನಡೆಯುವ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಡಯಟ್‌ನ ಉಪನಿರ್ದೇಶಕ ಓ.ಆರ್.ಪ್ರಕಾಶ್ ಅವರು ಮಾತನಾಡಿ, ಒಬ್ಬ ವ್ಯಕ್ತಿಯ ತನ್ನಲ್ಲಿನ ಕಲೆ ಹಾಗೂ ಪತ್ರಿಭೇ ಬಾಲ್ಯದಲ್ಲಿಯೇ ಬಿಂಬಿತಗೊಳ್ಳುತ್ತವೆ. ಅವುಗಳನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಮತ್ತು ಗುರುತಿಸುವ ಪೋಷಕರು, ಶಿಕ್ಷಕರು ಮುಖ್ಯವಾಗುತ್ತಾರೆ. ಕಲೆ ಎಲ್ಲರನ್ನು ಕೈ ಬೀಸಿ ಕರೆಯುತ್ತದೆ, ಆದರೆ ಕೆಲವರನ್ನು ಮಾತ್ರ ಅಪ್ಪಿಕೊಳ್ಳುತ್ತದೆ. ಗೆದ್ದವರು ಸಂತಸಪಟ್ಟರೆ, ಸೋತವರಿಗೆ ಮತ್ತೊಮ್ಮೆ ಗೆಲ್ಲುವ ಅವಕಾಶ ಇರುತ್ತದೆ. ಬೇರೆ–ಬೇರೆ ಅವಕಾಶಗಳು ತೆರೆದುಕೊಳ್ಳುತ್ತವೆ. ಹಾಗಾಗಿ ಸೋಲು–ಗೆಲುವು ಸಮಾನವಾಗಿ ಸ್ವೀಕರಿಸಬೇಕು ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ನೋಡೆಲ್ ಅಧಿಕಾರಿ ವಿರೇಶಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರತಿಭಾ ಕಾರಂಜಿಯ ಧ್ಯೇಯೊದ್ದೇಶಗಳನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಮತ್ತು ಪ್ರೌಢ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು ವೈಯಕ್ತಿಕ ಹಾಗೂ ಸಾಮೂಹಿಕ ವಿಭಾಗಗಳಲ್ಲಿ ಅವಕಾಶ ಕಲ್ಪಿಸಲಾಗಿತ್ತು.

ಸಂತಜಾನರ ಪ್ರೌಢಶಾಲೆಯ ಮುಖ್ಯಗುರುಗಳಾದ ಶಾಂತುಶೀಲನ್ ಸೇರಿದಂತೆ ಜಿಲ್ಲಾ ಶಿಕ್ಷಣಾಧಿಕಾರಿಗಳು, ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿಗಳು, ಡಯಟ್ ಉಪನ್ಯಾಸಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರು, ವಿಷಯ ಪರಿವೀಕ್ಷಕರು ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಸರ್ಕಾರಿ, ಅನುದಾನ ರಹಿತ ಶಾಲೆಗಳ ಮುಖ್ಯ ಗುರುಗಳು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು, ಇತರರು ಉಪಸ್ಥಿತರಿದ್ದರು.

# ಕಾಂಗ್ರೆಸ್ ಕುತಂತ್ರದಿಂದ ಗೊಂದಲ ಸೃಷ್ಟಿ ದುರ್ಬಲಗೊಂಡ ಕಾನೂನು ಸುವ್ಯವಸ್ಥೆ ಸಿಟಿ ರವಿ ಬಂಧನ ಖಂಡಿಸಿ ಪ್ರತಿಭಟನೆ

ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಕೊಟ್ರೇಶ್ ಕಿಚಿಡಿ ಆಕ್ರೋಶ



■ ಹಂಪಿ ಟೈಮ್ಸ್ ಹೊಸಪೇಟೆ

ಕೇಂದ್ರ ಗೃಹಮಂತ್ರಿ ಅಮಿತ್ ಶಾ ಅವರ ಹೇಳಿಕೆಯ ಸಂಪೂರ್ಣ ತುಣುಕನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕದೆ, ಭಾಗಶಃ ತುಣುಕನ್ನು ಹಾಕಿ ಬೇರೆಯೇ ರೀತಿಯಲ್ಲಿ ಅರ್ಥೈಸುವಂತೆ ಮಾಡಿ ಸಮಾಜದ ಜನರ ಭಾವನೆಗಳಿಗೆ ಧಕ್ಕೆ ತರಲು ಕಾಂಗ್ರೆಸ್ ಮುಂದಾಗಿದೆ ಎಂದು ಆರೋಪಿಸಿ, ಮಾಜಿ ಸಚಿವ ಎಂಎಲ್‌ಸಿ ಸಿಟಿ ರವಿ ಅವರನ್ನು ಬಂಧಿಸಿರುವುದನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ನಗರದ ಪುನೀತ್‌ರಾಜ್‌ಕುಮಾರ್ ವೃತ್ತದಲ್ಲಿ ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಕೊಟ್ರೇಶ್ ಕಿಚಿಡಿ ಮಾತನಾಡಿ, ಕೇಂದ್ರ ಗೃಹಮಂತ್ರಿ ಅಮಿತ್ ಶಾ ರಾಷ್ಟ್ರಕಂಡತ ಪ್ರಬುದ್ಧ ರಾಜಕಾರಣಿಗಳಲ್ಲೊಬ್ಬರು, ಸಂವಿಧಾನ ಹಾಗೂ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಅಪಾರ ಗೌರವ ಇಟ್ಟಕೊಂಡಿದ್ದಾರೆ. ಕಾಂಗ್ರೆಸ್ ಆಡಳಿತ ಸಂದರ್ಭದಲ್ಲಿ ಅಂಬೇಡ್ಕರ್ ಅವರನ್ನು ನಡೆಸಿಕೊಂಡಿರುವ ರೀತಿಯನ್ನು ಸದನದಲ್ಲಿ ಹೇಳಿದ್ದಾರೆ ಹೊರತು ಸಂವಿಧಾನ ವಿರೋಧಿ ಮಾತನ್ನು ಹೇಳಿಲ್ಲ. ಇದನ್ನು ತಿರುಚಿ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವಿಸ್ತರಿಸಿ ಸಮಾಜದಲ್ಲಿ ಗೊಂದಲ ಸೃಷ್ಟಿಸಿದ್ದಾರೆ. ಬೆಳಗಾವಿಯಲ್ಲಿ ಎಂಎಲ್‌ಸಿ ಸಿ.ಟಿ.ರವಿ ಅವರನ್ನು ಅಮಾನುಷವಾಗಿ ನಡೆಸಿಕೊಂಡ ರೀತಿ ನೋಡಿದರೆ ರಾಜ್ಯ ಸರ್ಕಾರ ತುಘಲಕ್ ಆಡಳಿತ ನಡೆಸುತ್ತಿದೆ ಎಂಬುದು ತೋರಿಸುತ್ತಿದೆ. ವಿಧಾನಸೌಧದಲ್ಲಿ ಮಾರ್ಷಲ್ ಅವರ ಸಮ್ಮುಖದಲ್ಲೆ ಕೆಲವರು ಗೂಂಡಾವರ್ತನೆ ಮಾಡಿದ್ದು ಕಾನೂನು ಸುವ್ಯವಸ್ಥೆ ದುರ್ಬಲಗೊಂಡಿರುವುದನ್ನು ಸಾಕ್ಷೀಕರಿಸುತ್ತದೆ. ಸಿ.ಟಿ.ರವಿ ಅವರನ್ನು ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಓಬಿಸಿ ಮೋರ್ಚಾದ ರಾಜ್ಯ ಉಪಾಧ್ಯಕ್ಷ ಅಯ್ಯಳ್ಳಿ ತಿಮ್ಮಪ್ಪ, ಜಿಲ್ಲಾ ಉಪಾಧ್ಯಕ್ಷ ಭರಮನ ಗೌಡ, ಪ್ರಧಾನ ಕಾರ್ಯದರ್ಶಿ ಕೆ.ಎಸ್.ರಾಘವೇಂದ್ರ, ಮಂಡಲ ಅಧ್ಯಕ್ಷ ಶಂಕರ್ ಮೇಟಿ, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಗದೀಶ್ ಕಮಟಗಿ, ರೇವಣ ಸಿದ್ದಪ್ಪ, ಮಧುರಚನ್ನಶಾಸ್ತ್ರಿ, ಮಧುಸೂದನ್, ಸಾಲಿ ಸಿದ್ದಯ್ಯ, ಸೂರಿ ಬಂಗಾರು, ಚಂದ್ರು ದೇವಲಾಪುರ ಇತರರಿದ್ದರು.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಜೀವನೋಪಾಯಕ್ಕೆ ಆರ್ಥಿಕ ನೆರವು

ಗುಣಮುಖರಾದ ಫಲಾನುಭವಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆ, ಡೆಮಿನ್ ಫೌಂಡೇಶನ್‌ನಿಂದ ಸಹಾಯ

■ ಹಂಪಿ ಟೈಮ್ಸ್ ಹೊಸಪೇಟೆ

ಕುಷ್ಠರೋಗದಿಂದ ಗುಣಮುಖ ಹೊಂದಿದ ಹಗರಿಬೊಮ್ಮನಹಳ್ಳಿ ತಾಲೂಕಿನ ಹೀರೆ ಸೊಬಟಿಗಿಯ ಫಲಾನುಭವಿಗೆ ಜೀವನೋಪಾಯಕ್ಕಾಗಿ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಡೆಮಿನ್ ಫೌಂಡೇಶನ್ ವತಿಯಿಂದ ಓ.ರೇಣುಕಾ ಗಂಡ ಲಕ್ಷ್ಮೀಪತಿ ಇವರಿಗೆ ಸುಮಾರು 45000 ರೂಗಳ, ಫುಡ್ ಸ್ಟಾಲ್ ಮತ್ತು ಚಿಕ್ಕ ಅಂಗಡಿ ಇಟ್ಟುಕೊಳ್ಳಲು ಆರ್ಥಿಕ ನೆರವು ನೀಡಿದರು.




ಡೆಮಿನ್ ಫೌಂಡೇಶನ್‌ನ ಸಂಯೋಜಕ ಸುಧಾಕರ, ಆರೋಗ್ಯ ನಿರೀಕ್ಷಿಣಾಧಿಕಾರಿ ಶಿವ ಲಿಂಗಪ್ಪ, ಆಶಾಕಾರ್ಯಕರ್ತರು, ಆರೋಗ್ಯ ಇಲಾಖೆ ಸಿಬ್ಬಂದಿ ಇದ್ದರು. ಬದುಕಿಗೆ ಆಸೆರೆಯಾದ ಇಲಾಖೆಯ ಅಧಿಕಾರಿಗಳಿಗೆ ಫಲಾನುಭವಿಗಳು ಕೃತಜ್ಞತಾ ದನ್ಯವಾದಗಳನ್ನು ತಿಳಿಸಿದರು.

# ಪುಸ್ತಕಗಳನ್ನೆ ಗೆಳೆಯರನ್ನಾಗಿಸಿಕೊಳ್ಳಿ

## ಮೊಬೈಲ್ ಗೀಳನ್ನು ಬಿಟ್ಟು ಪುಸ್ತಕಗಳನ್ನು ಖರೀದಿಸಿ ಓದಬೇಕು

ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ ಮುನಿರಾಜು ಹೇಳಿಕೆ





■ ಹಂಪಿ ಟೈಮ್ಸ್ ಬಳ್ಳಾರಿ

ಪುಸ್ತಕಗಳು ಮನುಷ್ಯನ ಜ್ಞಾನ ವೃದ್ಧಿ ಮಾತ್ರವಲ್ಲದೆ, ಭೌತಿಕ ಬೆಳವಣಿಗೆ ಹೊಂದಲು ಸಹಕಾರಿಯಾಗುತ್ತವೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ ಮುನಿರಾಜು ಹೇಳಿದರು.

ನಗರದ ಸರಳಾದೇವಿ ಸತೀಶ್ಚಂದ್ರ ಅಗರ್‌ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಸ್ನಾತಕ ಪದವಿಯ ಪಠ್ಯದ ಭಾಗವಾದ ವಾಣಿಜ್ಯ ಸೌರಭ, ವಿಜ್ಞಾನ ಸೌರಭ ಮತ್ತು ಕಲಾ ಸೌರಭ ಎಂಬ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರತಿಯೊಬ್ಬರೂ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಮೊಬೈಲ್ ಗೀಳನ್ನು ಬಿಟ್ಟು ಯುವಜನತೆ ಪುಸ್ತಕಗಳನ್ನು ಖರೀದಿಸಿ ಓದಬೇಕು ಆಗ ಮಾತ್ರ ಪುಸ್ತಕ ಪ್ರೀತಿ ಇಮ್ಮಡಿಗೊಳ್ಳುತ್ತದೆ ಎಂದು ತಿಳಿಸಿದರು.

ವಿವಿಯ ಕಲಾ ನಿಕಾಯದ ಡೀನರಾದ ಪ್ರೊ.ಶಾಂತನಾಯ್ಕ್ ಅವರು ಮಾತನಾಡಿ, ಮೌಲ್ಯಯುತ ಪುಸ್ತಕಗಳು ವಿದ್ಯಾರ್ಥಿಯ ಜೀವನವನ್ನು ಬದಲಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಎಲ್ಲ ಭಾಷೆಯ ಪುಸ್ತಕಗಳನ್ನು ಓದಿರಿ, ಆದರೆ ಕನ್ನಡ ಪುಸ್ತಕಗಳನ್ನು ಪ್ರೀತಿಸಿರಿ ಎಂದು ಹೇಳಿದರು.

ವಿವಿಯ ಪ್ರಸಾರಾಂಗ ನಿರ್ದೇಶಕ ಪ್ರೊ. ಅರುಣ್ ಕುಮಾರ್ ಲಗಶೆಟ್ಟಿ ಅವರು ಮಾತನಾಡಿ, ಪ್ರಸಾರಾಂಗದಿಂದ ಪ್ರಕಟಗೊಂಡಿರುವ ಬಳ್ಳಾರಿ ದರ್ಶನ ಪುಸ್ತಕವು ಹೆಚ್ಚು ಬೇಡಿಕೆಯಲ್ಲಿದ್ದು, ಪಠ್ಯಕ್ರಮದ ಪುಸ್ತಕಗಳನ್ನು ಹೆಚ್ಚಾಗಿ ಪ್ರಕಟಿಸಲು ಮುಂಬರುವ ದಿನಗಳಲ್ಲಿ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪುಸ್ತಕದ ಸಂಪಾದಕರಿಗೆ ಗೌರವಿಸಿ ಪುಸ್ತಕದ ಗೌರವ ಪ್ರತಿಗಳನ್ನು ನೀಡಲಾಯಿತು. ಈ ವೇಳೆ ಎಸ್‌ಎಸ್‌ಎ ಕಾಲೇಜಿನ ಪ್ರಾಂಶುಪಾಲರಾದ ಡಾ.ಮೋನಿಕಾ ರಂಜನ್, ಡಾ.ಹೊನ್ನೂರ್ ಅಲಿ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

10 ನೇ ತರಗತಿ ಹಿಂದಿ

### कर्नाटक संपदा

ಮುಂದುವರೆದ ಭಾಗ -----

**I . अनुरूपता :**

1)बिजापुर का गोलगुंबज : वास्तुकला :: बेलूर, हलेबीडू की मूर्तियाँ : ------ ( शिल्पकला )
2) आर्ट गैलरी : जगनमोहन राजमहल :: व्हिस्परिंग गैलरी : -----( गोलगुंबज )
3) कावेरी : नदी :: जोग : ( जलप्रपात )
4) कुवेंपु : ज्ञानपीठ से पुरस्कृत ::डॉ सी. एन. आर. राव: -------- ( भारत रत्न से पुरस्कृत )

**II . एक वाक्य में उत्तर लिखिए |**

5) कर्नाटक को चंदन का आगर क्यों कहते हैं ?
**उत्तर :** कर्नाटक में **चंदन का पेड विपुल मात्रा में होने के कारण** कर्नाटक को चंदन का आगर कहते है |

6) कर्नाटक की पश्चिम दिशा में कौन-सी पर्वतमलाएँ शोभायमान हैं ?
**उत्तर :**कर्नाटक की पश्चिम दिशा में **सह्यादि** पर्वतमलाएँ शोभायमान हैं |

7) सेंट फिलोमिना चर्च किस नगर में है ?
**उत्तर :**सेंट फिलोमिना चर्च **मैसूरू** नगर में है |

**III. तीन -चार वाक्यों में उत्तर लिखिए |**

**8) बेंगलूरू विश्वभर में क्यों प्रसिद्ध है ? वर्णन कीजिए |**
**उत्तर :** बेंगलूरू कर्नाटक की राजधानी है | बेंगलूरू शिक्षा का ही नही , बल्कि बडे - बडे उद्योग-धंधो का भी केंद्र है | यहाँ प्रसिद्ध भारतीय विज्ञान संस्थान, एच.ए.एल., एच.एम.टी, आइ.टी.आइ, बी.एच.ई. एल, बी.ई.एल, जैसी बृहत संस्थाएँ हैं | इसे ' सिलिकॉन सिटि ' भी कह जाता है |

**9) कन्नड भाषा तथा संस्कति को कर्नाटक के साहित्यकारो की क्या देन है ?**
**उत्तर :**
* कर्नाटक के अनेक साहित्यकारों ने कर्नाटक की कीर्ति फैलायी हैं ।
* वचनकार बसवण्णा क्रांतिकारी समाज सुधारक थे ।
* अक्कमहादेवी, अल्लमप्रभु , सर्वज्ञ जैसे अनेक संतो ने अपने अनमोल ' वचनों द्वारा प्रेम, दया और धर्म की सीख दी है |
* पुरंदरदास, कनकदास आदि भक्त कवियों ने भक्ति, नीति, सदाचार के गीत गाये हैं |
* पंपा, रन्न, पोन्न, कुमारव्यास, हरिहर, राघवांक आदि ने महान काव्यों की रचना कर कन्नड साहित्य को समृद्ध बनाया हैं ।
* आधुनिक काल के साहित्यकार कुवेंपु , द. रा. बेंद्रे, शिवराम कारंत, मास्ति वेंकटेश अय्यंगार, वि. कृ गोकाक, यू.आर.अनंत मूर्ति, गिरीश कार्नाड और चंद्रशेखर कंबार ज्ञानपीठ पुरस्कार से अलंकृत है ।

---

### रचना भाग

**कन्नड में अनुवाद करना :**

10) कर्नाटक में कन्नड भाषा बोली जाती है , और इसकी राजधानी बेंगलूरू है | यहाँ देश- विदेश से लोग आकर बस गये हैं |

**ಉತ್ತರ :** ಕರ್ನಾಟಕದಲ್ಲಿ ಕನ್ನಡ ಭಾಷೆ ಮಾತನಾಡಲಾಗುತ್ತದೆ. ಮತ್ತು ಬೆಂಗಳೂರು ಇದರ ರಾಜಧಾನಿಯಾಗಿದೆ. ಇಲ್ಲಿ ದೇಶ-ವಿದೇಶಗಳಿಂದ ಜನರು ಬಂದು ನೆಲೆಸಿದ್ದಾರೆ.

---

ವಿಶೇಷ ಸೂಚನೆ :

* ವಾರ್ಷಿಕ ಪರೀಕ್ಷೆಯಲ್ಲಿ ಈ ಪಾಠದ ಆಧಾರದ ಮೇಲೆ 04 ಅಂಕಗಳಿಗೆ ಪ್ರಶ್ನೆಗಳನ್ನು ಕೇಳಲಾಗುವುದು.

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ | ಸಂವತ್ಸರ: ಕ್ರೋಧಿ

**21-12-2024 – ಶನಿವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆಶ್ಲೇಷ |
| ಯೋಗ | : ವೃಧೃತಿ |
| ಕರಣ | : ಬಾಳವ |
| ಸೂರ್ಯೋದಯ | : 07:05:08 |
| ಸೂರ್ಯಾಸ್ತ | : 17:45:22 |
| ರಾಹು ಕಾಲ | : 09:45–11:05 |
| ಯಮಘಂಡ ಕಾಲ | : 13:45–15:05 |
| ಗುಳಿಕ ಕಾಲ | : 07:05–08:25 |



## ತುಂಗಭದ್ರಾ ನೀರಿನ ಮಟ್ಟ

**ಶುಕ್ರವಾರ : 20-12-2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.64 ಅಡಿ |
| ಒಳ ಹರಿವು | 1613 ಕ್ಯೂಸೆಕ್ |
| ಹೊರ ಹರಿವು | 6721 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 89.045 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1589.94 ಅಡಿ |
| ಒಳ ಹರಿವು | 0 ಕ್ಯೂಸೆಕ್ |
| ಹೊರ ಹರಿವು | 1295 ಕ್ಯೂಸೆಕ್ |
| ಸಾಮರ್ಥ್ಯ | 10.980 ಟಿಎಂಸಿ |

**Greetings**
You can also say
in Hampi Times
Ads Starts from Rs.1000/-
94486 33038

### 87 ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿ ಹೇಳಿಕೆ

# ಮಂಡ್ಯದಲ್ಲಿ ಪರಭಾಷಿಕರು ಕನ್ನಡ ಕಲಿತಾರೆ

# ಅಕ್ಷರ ಜಾತ್ರೆಗೆ ಹರಿದು ಬಂದ ಜನಸಾಗರ

■ **ಹಂಪಿ ಟೈಮ್ಸ್ ಮಂಡ್ಯ**

ಸಕ್ಕರೆ ನಗರಿ ಮಂಡ್ಯದಲ್ಲಿ ಮೂರು ದಿನಗಳ ಕಾಲ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಚಾಲನೆ ನೀಡಿದರು.

ಕರ್ನಾಟಕದಲ್ಲಿ ಅತಿ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆಯೆಂದು ಹೆಸರು ಪಡೆದಿರುವ ಹಾಗೂ ಸಕ್ಕರೆ ನಗರಿ ಎಂದೇ ಪ್ರಸಿದ್ಧವಾಗಿರುವ ಮಂಡ್ಯದಲ್ಲಿ ಆಯೋಜಿಸಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಅಭಿಮಾನದಿಂದ ಹಾಗೂ ಸಂತೋಷದಿಂದ ಉದ್ಘಾಟಿಸಿ ಮಾತನಾಡಿದರು.

ಅಪ್ಪಟ ಕನ್ನಡ ನೆಲ ಮಂಡ್ಯ. ಮಂಡ್ಯಕ್ಕೆ ಬರುವ ಪರಭಾಷಿಕರು ಸಹ ಕನ್ನಡವನ್ನು ಕಲಿಯುತ್ತಾರೆ. ಕನ್ನಡ ನಾಡಿನ ಭಾಷೆ , ರಾಜ್ಯಭಾಷೆ ಆಗಿದೆ ಎಂದರು.

ಶ್ರೀ ಆದಿ ಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ದಿವ್ಯ ಸಾನಿಧ್ಯವಹಿಸಿದ್ದರು. ಸಮ್ಮೇಳನಾ ಧ್ಯಕ್ಷರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪ, ಹಿರಿಯ ಸಾಹಿತಿಗಳಾದ ಡಾ. ದೊಡ್ಡರಂಗೇಗೌಡ, ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರಾದ ಡಾ ಚಂದ್ರ ಶೇಖರ ಕಂಬಾರ, ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕೃಷಿ ಸಚಿವರಾದ ಚೆಲುವನಾರಾಯಣ ಸ್ವಾಮಿ, ಸಮಾಜ ಕಲ್ಯಾಣ



ಇಲಾಖೆಯ ಸಚಿವರಾದ ಡಾ ಹೆ.ಚ್.ಸಿ.ಮಹದೇವಪ್ಪ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಾದ ಮುನಿಯಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ತಂಗಡಗಿ, ಕರ್ನಾಟಕ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಲಮಾಣಿ, ಶಾಸಕರಾದ ಪಿ.ಎಂ.ನರೇಂದ್ರ ಸ್ವಾಮಿ, ಪಿ.ರವಿಕುಮಾರ್, ಎಂ.ಬಿ,ರಮೇಶ್ ಬಂಡಿ ಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಕೆ.ಎಂ.ಉದಯ ಹಾಗೂ ಗಣ್ಯರು ಇದ್ದರು.


ಸಕ್ಕರೆ ನಗರಿ ಮಂಡ್ಯದಲ್ಲಿ ನಡೆಯುತ್ತಿರುವ 87 ನೆ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ನಿರೀಕ್ಷೆಗೂ ಮೀರಿ ಜನ ಸಾಗರ ಹರಿದು ಬಂತು. ಬೆಳಗ್ಗೆ 8 ಗಂಟೆಯಿಂದಲೇ ಸ್ಥಳೀಯ ನಾಗರಿಕರು, ಮಹಿಳೆಯರು, ವಿದ್ಯಾ ರ್ಥಿಗಳು ಸಾಹಿತ್ಯ ಸಮ್ಮೇಳನವನ್ನು ಕಣ್ಮನ ತುಂಬಿಕೊಳ್ಳಲು ತಂಡೋಪ ತಂಡವಾಗಿ ಆಗಮಿಸಿದರು. ರಾಜ್ಯದ ನಾನಾ ಜಿಲ್ಲೆಗಳಿಂದ ಕನ್ನಡಾಭಿಮಾನಿಗಳು, ಸಾಹಿತಿಗಳು, ಸಾಹಿತ್ಯಾಸಕ್ತರು ಗುರುವಾರವೇ ನಗರಕ್ಕೆ ಆಗಮಿಸಿದರು. ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿಧಿಗಳಿಗೆ ಅಚ್ಚುಕಟ್ಟಾಗಿ ವ್ಯವಸ್ಥೆಯನ್ನು ಜಿಲ್ಲಾಡಳಿತ ಮಾಡಿದ್ದು, ಸಮ್ಮೇಳನದ ಬಗ್ಗೆ ಜನರು ಮೆಚ್ಚುಗೆ ವ್ಯಕ್ತಪಡಿಸಿದರು.

ಮೆರವಣಿಗೆಯಲ್ಲಿ ಹಾಗೂ ಮುಖ್ಯವೇದಿಕೆಯಲ್ಲಿ ಜನಸಾಗರ ಜಮಾಯಿಸಿದ್ದ ಕಾರಣ ಹಾಗೂ ಯಾವುದೇ ಅಹಿತಕರ ಘಟನೆ ನಡೆಯಬಾರದೆಂಬ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾ ಪೊಲೀಸ್ ಇಲಾಖೆ ಭಾರೀ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಒಟ್ಟು 3,200 ಪೊಲೀಸ್ ಸಿಬ್ಬಂದಿಯನ್ನು ಸಾಹಿತ್ಯ ಸಮ್ಮೇಳನಕ್ಕೆ ನಿಯೋಜಿಸಲಾಗಿದೆ.

ಮಂಡ್ಯ ನಗರದಲ್ಲಿ ನಗರ ಸಾರಿಗೆ ಬಸ್ ಉಚಿತವಾಗಿ ಬಿಟ್ಟಿರುವುದರಿಂದ ನಗರದ ಜನತೆಯೂ ಸಹಸ್ರಾರು ಸಂಖ್ಯೆಯಲ್ಲಿ ಭಾಗವ ಹಿಸಿದರು.

ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಿದ ಹಿನ್ನೆಲೆಯಲ್ಲಿ ನಗರ ಸೇರಿದಂತೆ ಜಿಲ್ಲೆಯ ಬಹುತೇಕ ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮ್ಮೇಳನದ ಸರ್ವಾಧ್ಯಕ್ಷರು ವೇದಿಕೆಗೆ ಆಗಮಿಸುತ್ತಿದ್ದಂತೆ ಅಭೂತಪೂರ್ವ ಸ್ವಾಗತ ಕೋರಲಾಯಿತು










### ಎಸ್‌ಎಸ್‌ಎಲ್‌ಸಿ, ಪಿಯುಸಿ ತನಕ ಓದಿಕೊಂಡು ಜನತೆಗೆ ಚಿಕಿತ್ಸೆ

# ಐದು ನಕಲಿ ವೈದ್ಯರ ಕ್ಲಿನಿಕ್ ಸೀಜ್

**ಜಿಲ್ಲಾಧಿಕಾರಿ ಪ್ರಶಾಂತ ಕುಮಾರ ಮಿಶ್ರಾ ಸೂಚನೆ | ಡಿಎಚ್‌ಒ ಡಾ.ಯಲ್ಲಾ ರಮೇಶಬಾಬು ಕ್ರಮ**



■ **ಹಂಪಿ ಟೈಮ್ಸ್ ಬಳ್ಳಾರಿ**

ತಾಲ್ಲೂಕಿನ ಕಪ್ಪಗಲ್ಲು ಗ್ರಾಮದಲ್ಲಿ ಯಾವುದೇ ವೈದ್ಯಕೀಯ ಪದವಿ ಪಡೆಯದೇ ಔಷಧಿಗಳ ಮಾಹಿತಿ ಹೊಂದಿ ಜನತೆಗೆ ತಾವು ವೈದ್ಯ ರೆಂದು ಸುಳ್ಳು ಹೇಳಿ ವೈದ್ಯ ವೃತ್ತಿ ಮಾಡುತ್ತಿದ್ದ ನಕಲಿ ವೈದ್ಯರ 5 ಕ್ಲಿನಿಕ್‌ಗಳನ್ನು ಸೀಜ್ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು ತಿಳಿಸಿದ್ದಾರೆ.

ಸಾರ್ವಜನಿಕರಿಂದ ದೂರು ಬಂದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರ ಸೂಚನೆ ಮೇರೆಗೆ ತಾಲ್ಲೂಕ ಆರೋಗ್ಯ ಅಧಿಕಾರಿ ಡಾ.ಆರ್. ಅಬ್ದುಲ್ಲಾ ಅವರ ತಂಡ ಕಪ್ಪಗಲ್ಲು ಗ್ರಾಮಕ್ಕೆ ತೆರಳಿ ಸಾರ್ವಜನಿಕರಿಗೆ ತಾವು ವೈದ್ಯರೆಂದು ಬಿಂಬಿಸಿ ಯಾವುದೇ ವೈದ್ಯಕೀಯ ಪದವಿ ಪಡೆಯದೇ ಎಸ್‌ಎಸ್‌ಎಲ್‌ಸಿ, ಪಿಯುಸಿ ತನಕ ಓದಿಕೊಂಡು ಜನತೆಗೆ ಚಿಕಿತ್ಸೆ ನೀಡುತ್ತಿದ್ದ ರಾಜಣ್ಣ ಕ್ಲಿನಿಕ್, ಶೇಕ್ಷಾವಲಿ ಕ್ಲಿನಿಕ್, ರೆಹಮಾನ್ ಕ್ಲಿನಿಕ್, ಮಹದೇವ್ ಕ್ಲಿನಿಕ್ ಮತ್ತು ಗುರು ಕ್ಲಿನಿಕ್‌ಗಳನ್ನು ಸೀಜ್ ಮಾಡಿ ಜಿಲ್ಲಾಧಿಕಾರಿಗಳ ಮುಂದಿನ ಕ್ರಮಕ್ಕಾಗಿ ವರದಿ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಾರ್ವಜನಿಕರು ಆರೋಗ್ಯದ ದೃಷ್ಟಿಯಿಂದ ಅಧಿಕೃತ ವೈದ್ಯ ಪದವಿ ಪಡೆದ ವೈದ್ಯರ ಬಳಿ ತಪಾಸಣೆ ಮಾಡಿಸಿ ಚಿಕಿತ್ಸೆ ಪಡೆಯುವುದರಿಂದ ಆರೋಗ್ಯದ ಮೇಲೆ ಉಂಟಾಗಬಹುದಾದ ಗಂಭೀರ ಪರಿಣಾಮಗಳನ್ನು ತಡೆಯಬಹು ದಾಗಿದೆ.

ಗ್ರಾಮಗಳಲ್ಲಿ ವೈದ್ಯ ವೃತ್ತಿ ಮಾಡುತ್ತಿರುವವರು ಕಂಡುಬಂದಲ್ಲಿ ಅವರ ವೈದ್ಯಕೀಯ ಪದವಿಯ ಮಾಹಿತಿ ಪಡೆದುಕೊಂಡು ಚಿಕಿತ್ಸೆ ಪಡೆಯಬೇಕು. ಒಂದು ವೇಳೆ ನಕಲಿ ವೈದ್ಯರು ಎಂದು ಕಂಡುಬಂದರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯಕ್ಕೆ ದೂರು ನೀಡಬಹುದು. ಕರ್ನಾಟಕ ಖಾಸಗಿ ಆಸ್ಪತ್ರೆಗಳ ಅಧಿನಿಯಮ 2007 ರ ಅಡಿ ಕ್ರಮ ಜರುಗಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ದಾಳಿಯ ವೇಳೆ ಆರೋಗ್ಯ ನಿರೀಕ್ಷಣಾಧಿಕಾರಿ ಅರುಣ್ ಕುಮಾರ್, ಶಾಂತ್ ಕುಮಾರ್, ಮಹೇಂದ್ರ ಕುಮಾರ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ರಿಹಾನಾ ಸೇರಿ ದಂತೆ ಆಶಾ-ಕಾರ್ಯಕರ್ತೆಯರು ಹಾಜರಿದ್ದರು.

# ಜೀವ ರಕ್ಷಣೆಗಾಗಿ ಹೆಲ್ಮೆಟ್ ಕಡ್ಡಾಯ

**18 ವರ್ಷದೊಳಗಿನ ಮಕ್ಕಳ ಕೈಗೆ ಬೈಕ್ ಕೊಟ್ಟರೆ 25 ಸಾವಿರ ರೂ. ದಂಡ, ಜೈಲು ಶಿಕ್ಷೆ ಖಚಿತ ಪೋಷಕರೆ ಎಚ್ಚರ : ಪಿಎಸ್‌ಐ ಗೀತಾಂಜಲಿ**

■ **ಹಂಪಿ ಟೈಮ್ಸ್ ಕೊಟ್ಟೂರು**

ಬೈಕ್ ಸವಾರರು ತಮ್ಮ ಪ್ರಾಣದ ಸುರಕ್ಷತೆ ಹಾಗೂ ಕುಟುಂಬಸ್ಥರ ಹಿತ ದೃಷ್ಠಿಯಿಂದ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ಪಿಎಸ್‌ಐ ಗೀತಾಂಜಲಿ ಶಿಂಧೆ ಹೇಳಿದರು.

ಅಪರಾದ ತಡೆ ಮಾಸಾಚರಣೆ ನಿಮಿತ್ತ ಶುಕ್ರವಾರ ಸಿಬ್ಬಂದಿಯೊಂದಿಗೆ ಪಟ್ಟಣದಲ್ಲಿ ಬೈಕ್ ರ್‍ಯಾಲಿ ನಡೆಸಿ ಜಾಗೃತಿ ಮೂಡಿಸಿ ಮಾತನಾಡಿದರು.



ಇದೇ ವೇಳೆ ಹೆಲ್ಮೆಟ್ ಇಲ್ಲದೆ ರಸ್ತೆಯಲ್ಲಿ ಸಂಚರಿಸುತ್ತಿದ್ದ ಬೈಕ್ ಸವಾರರನ್ನು ತಡೆದು ತಮ್ಮನ್ನು ಆಶ್ರಯಿಸಿ ಹೆಂಡತಿ, ಮಕ್ಕಳು ಹಾಗೂ ತಂದೆ-ತಾಯಿಯ ಕುಟುಂಬ ಇದೆ, ಹೆಲ್ಮೆಟ್ ಇಲ್ಲದೆ ಸಂಚರಿಸಿ ಅಪಘಾತದಿಂದ ಅವರನ್ನು ಸಂಕಷ್ಟಕ್ಕೀಡು ಮಾಡದಿರಿ ಎಂದು ಹೇಳಿ ಹೆಲ್ಮೆಟ್ ಕೊಟ್ಟು, ನಿತ್ಯ ಸವಾರಿ ವೇಳೆ ಧರಿಸುವಂತೆ ತಿಳಿ ಹೇಳಿದರು.

ಬೈಕ್ ರ್‍ಯಾಲಿ ಹರಪನಹಳ್ಳಿ ರಸ್ತೆ ಪೊಲೀಸ್ ಠಾಣೆಯಿಂದ ಪ್ರಾರಂಭಗೊಂಡು, ಬಸ್ ನಿಲ್ದಾಣ, ಗಾಂಧಿ ಸರ್ಕಲ್‌ಗೆ ಸಾಗಿ ದೇವಸ್ಥಾನ ಮುಂಭಾಗದಿಂದ, ಉಜ್ಜಿನಿ ಸರ್ಕಲ್ ಮೂಲಕ ಮರಳಿ ಪೊಲೀಸ್ ಠಾಣೆಗೆ ಕೊನೆಗೊಂಡಿತು.

## ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ಮೊದಲ ಪುಟದಿಂದ**

ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಈಗಾಗಲೇ ಸೇವಾ ಸಿಂಧು ಮೂಲಕ ಅರ್ಜಿಗಳನ್ನು ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಶ್ಯಕತೆ ಇರುವುದಿಲ್ಲ.

ಅರ್ಜಿ ಸಲ್ಲಿಸಿದವರು ಉದ್ದೇಶ ಬದಲಾವಣೆ ಮಾಡಲು ಇಚ್ಚಿಸಿದ್ದಲ್ಲಿ https://swdcorp.karnataka.gov.in/ADCLPortal ನಲ್ಲಿ ನೇರ ಸಾಲ ಯೋಜನೆಯಡಿ ಕುರಿಸಾಕಾಣಿಕೆ ಉದ್ದೇಶಕ್ಕೆ ಹಾಗೂ ಸ್ವಾವಲಂಭಿ ಸಾರಥಿ ಯೋಜನೆಯಡಿ ಪುಡ್‌ಕಾರ್ಟ್ ಉದ್ದೇಶಕ್ಕೆ ಎಂದು ಬದಲಾವಣೆ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಕಂಟೋನ್‌ಮೆಂಟ್ ಪ್ರದೇಶದ ಆದರ್ಶ ಕಾಲೋನಿಯ ಸೆಂಟ್ ಜೋಸೆಫ್ ಬಾಲಕರ ಶಾಲೆಯ ಎದುರುಗಡೆಯ ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ಕಚೇರಿಗೆ ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

